ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಮಂಡ್ಯ – 571 401
MANDYA INSTITUTE OF MEDICAL SCIENCES
MANDYA -571 401
(Autonomous Medical Institution, Government of Karnataka)

Phone & Fax : 08232-231001
Director : 08232-222086
CAO : 08232-231197
FA : 08232-401198
E.Mail Address:
mimsmandya@gmail.com

21.09.2012

**ದಿನಾಂಕ: 29.08.2012 ರಂದು ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೌನ್ಸಿಲ್ ಸಭಾಂಗಣದಲ್ಲಿ ಮಿಮ್ಸ್ ವರ್ಕ್ಸ್ ಕಮಿಟಿಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ವಿವಿಧ ಕಟ್ಟಡ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು:**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ
2. ನಿರ್ದೇಶಕರು, ಮಿಮ್ಸ್, ಮಂಡ್ಯ.
3. ಪ್ರಭಾರ ವೈದ್ಯಕೀಯ ಅಧೀಕ್ಷಕರು, ಮಿಮ್ಸ್ ಬೋಧಕ ಆಸ್ಪತ್ರೆ, ಮಿಮ್ಸ್, ಮಂಡ್ಯ.
4. ಪ್ರಭಾರ ಮುಖ್ಯ ಆಡಳಿತಾಧಿಕಾರಿಗಳು, ಮಿಮ್ಸ್, ಮಂಡ್ಯ.
5. ಆರ್ಥಿಕ ಸಲಹೆಗಾರರು, ಮಿಮ್ಸ್ ಮಂಡ್ಯ.
6. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಡ್ಯ.
8. ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಉಪವಿಭಾಗ–1, ಮಂಡ್ಯ.
9. ಸಹಾಯಕ ಅಭಿಯಂತರರು, (ವಿದ್ಯುತ್ ವಿಭಾಗ), ಲೋಕೋಪಯೋಗಿ ಇಲಾಖೆ, ಮಂಡ್ಯ.
10. ಮೆ॥ ಪರಿಸರ ಕನ್ಸಲ್‌ಟೆಂಟ್, ಶಿವಮೊಗ್ಗ.
11. ನಿರ್ಮಿತಿ ಕೇಂದ್ರ, ಮಂಡ್ಯ.

ಸಂಸ್ಥೆಯ ನಿರ್ದೇಶಕರು, ವರ್ಕ್ಸ್ ಕಮಿಟಿಯ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳು, ಸಂಸ್ಥೆಯ ಅಧಿಕಾರಿಗಳು ಮತ್ತು ಗುತ್ತಿಗೆದಾರರನ್ನು ಸಭೆಗೆ ಸ್ವಾಗತಿಸಿದರು.
ಹಿಂದಿನ ಸಭೆಯ ನಡವಳಿಗಳ ಬಗ್ಗೆ ಕೈಗೊಂಡ ಕ್ರಮಗಳನ್ನು ವಿವರಿಸಲಾಯಿತು.

**1) ಲೋಕೋಪಯೋಗಿ ಇಲಾಖೆಗೆ ವಹಿಸುವ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳದಿರುವ ಬಗ್ಗೆ. (ಸರ್ಕಾರದ ಅನುಮೋದನೆ ಆಗಿದ್ದು ಕಾಮಗಾರಿ ಕೈಗೊಳ್ಳಲು ಪತ್ರ ಬರೆದಿರುತ್ತದೆ.)**

1. ಬೋಧಕ ಆಸ್ಪತ್ರೆಯ ರೇಡಿಯೊಲಜಿ ವಿಭಾಗದ ದುರಸ್ತಿ ಮತ್ತು ನವೀಕರಣ ಕಾಮಗಾರಿ ಅಂದಾಜು ವೆಚ್ಚ ರೂ. 46.00 ಲಕ್ಷಗಳು.
2. ಜಿಲ್ಲಾ ಆಸ್ಪತ್ರೆಯ ಅಪ್ರೋಚ್ ರಸ್ತೆಯನ್ನು ಅಗಲಪಡಿಸಿ ಡಾಂಬರು ಹಾಕುವ ಕಾಮಗಾರಿ ಅಂದಾಜು ವೆಚ್ಚ ರೂ. 28.50 ಲಕ್ಷಗಳು.
3. ಬೋಧಕ ಆಸ್ಪತ್ರೆಯ ಉತ್ತರ ಭಾಗದ ಎಡಬಾಗದಲ್ಲಿರುವ (North side) ಆವರಣ ಗೋಡೆ ಮರುನಿರ್ಮಾಣ ಕಾಮಗಾರಿ. ಅಂದಾಜು ವೆಚ್ಚ ರೂ. 19.80 ಲಕ್ಷಗಳು.

ಕ್ರಮ:- ತುರ್ತಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಾಗಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಮಂಡ್ಯ ರವರು ಸಭೆಯಲ್ಲಿ ತಿಳಿಸಿದರು.

## 2) ಕಾಮಗಾರಿ ಕೆಲಸ ಕುಂಠಿತಗೊಂಡಿರುವ ಬಗ್ಗೆ.

ಅ. ಕ್ಯಾನ್ಸರ್ ಕಟ್ಟಡದ ಮೇಲೆ 100 ಹಾಸಿಗೆಗಳ ವಾರ್ಡ್ ನಿರ್ಮಾಣದ ಕಾಮಗಾರಿ ಕೆಲಸ (ಆರ್.ಸಿ.ಸಿ ಆಗಿದೆ) , ಸದರಿ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ಮೊಸಾಯಿಕ್ ಫ್ಲೋರಿಂಗ್‌ಗಾಗಿ ರೂ26 ಲಕ್ಷಗಳನ್ನು ನಿಗಧಿ ಪಡಿಸಲಾಗಿತ್ತು. ಈಗ ಮೊಸಾಯಿಕ್ ಫ್ಲೋರಿಂಗ್ ಬದಲಾಗಿ ಆಂಟಿಸ್ಕಿಡ್ ಫ್ಲೋರಿಂಗ್ ಒದಗಿಸಲು ಕೋರಿಕೆ ಸಲ್ಲಿಸಿರುತ್ತಾರೆ. ಈ ಬದಲಾವಣೆಯಿಂದಾಗಿ ನಿಗಧಿತ ಮೊತ್ತಕ್ಕಿಂತ ರೂ5.60ಲಕ್ಷಗಳು. ಹೆಚ್ಚುವರಿ ವೆಚ್ಚ ಭರಿಸಬೇಕಾಗಿದೆ. ಹೆಚ್ಚುವರಿ ವೆಚ್ಚ ಭರಿಸಲು ಅನುಮತಿ ಕೋರಿ ಮಂಡಿಸಿದೆ. ಸರ್ಕಾರದಿಂದಲೂ ಕಡತ ಸಂ: ಮಿಮ್ಸ್ ಕಟ್ಟಡ ಸಿ.ಆರ್ 31/2010-11 ರಲ್ಲಿ ಅನುಮತಿ ಪಡೆಯಲಾಗಿದೆ.

ಕ್ರಮ:- ಹೆಚ್ಚುವರಿ ಮೊತ್ತವನ್ನು ಭರಿಸಲು ಸಭೆಯು ಅನುಮೋದಿಸಿತು.

ಆ. ಕಾಲೇಜಿನ ಮುಂಬಾಗದಲ್ಲಿ ಆವರಣ ಗೋಡೆ ನಿರ್ಮಾಣ ಕಾಮಗಾರಿ (ಕಾಂಪೌಂಡ್ ಕಟ್ಟಡ)ಯು ಪೂರ್ಣಗೊಳ್ಳುವ ಹಂತದಲ್ಲಿದೆ. ನಿರ್ದೇಶಕರು ಕಾಮಗಾರಿಯ ವಿಳಂಬ ಆಗಿರುವ ಬಗೆಗೆ ಆಕ್ಷಪಣೆ ವ್ಯಕ್ತಪಡಿಸಿದರು ಹಾಗೂ ಆದಷ್ಟು ಶೀಘ್ರವಾಗಿ ಪೂರೈಸಿಕೊಡಲು ಕೋರಿದರು.

ಕ್ರಮ:- ಸೆಪ್ಟೆಂಬರ್-2012 ರ ಅಂತ್ಯದೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಮಂಡ್ಯ ರವರು ಸಭೆಯಲ್ಲಿ ತಿಳಿಸಿದರು.

ಇ. ಕಾಲೇಜು ಕಟ್ಟಡದ ಎಡಬಾಗದ (Left side) ಹೊರಾಂಗಣ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಬಗ್ಗೆ (Land scape) ಕಾಮಗಾರಿಯು ಪ್ರಗತಿಯಲ್ಲಿದೆ. ನಿರ್ದೇಶಕರು ಕಾಮಗಾರಿಯ ವಿಳಂಬ ಆಗಿರುವ ಬಗೆಗೆ ಆಕ್ಷಪಣೆ ವ್ಯಕ್ತಪಡಿಸಿದರು ಹಾಗೂ ಆದಷ್ಟು ಶೀಘ್ರವಾಗಿ ಪೂರೈಸಿಕೊಡಲು ಕೋರಿದರು.

ಕ್ರಮ:- ಸೆಪ್ಟೆಂಬರ್-2012 ರ ಅಂತ್ಯದೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಮಂಡ್ಯ ರವರು ಸಭೆಯಲ್ಲಿ ತಿಳಿಸಿದರು.

## 3) ಹೊಸದಾಗಿ ಕೈಗೆತ್ತಿಕೊಳ್ಳಬೇಕಿರುವ ಕಾಮಗಾರಿಗಳಿಗೆ ಅನುಮೋದನೆ ಪಡೆದುಕೊಳ್ಳುವ ಕುರಿತು.

1. ಮಿಮ್ಸ್ ಬೋಧಕ ಆಸ್ಪತ್ರೆಯ ಶುಶ್ರೂಷಕ/ ಶುಶ್ರೂಷಕಿ ರವರುಗಳಿಗೆ 60 ವಸತಿ ಗೃಹ ನಿರ್ಮಿಸುವಿಕೆ.
2. ಆರು ಮೇಜರ್ ಶಸ್ತ್ರಚಿಕಿತ್ಸಾ ಕೊಠಡಿಗಳು ಮತ್ತು ಸುಟ್ಟಗಾಯಗಳ ವಾರ್ಡ್ ಸೇರಿದಂತೆ 250 ಹಾಸಿಗೆ ಸೌಲಭ್ಯಯುಳ್ಳ ಸರ್ಜಿಕಲ್ ಬ್ಲಾಕ್ ನಿರ್ಮಿಸುವಿಕೆ. (ಟಿ.ಬಿ.ಸೆಂಟರ್ ಕಟ್ಟಡ ಇರುವ ಜಾಗವನ್ನು ಗುರುತಿಸಿದೆ.)
3. ಮಿಮ್ಸ್ ಕಾಲೇಜು ಕಟ್ಟಡದ ಮೊದಲನೆ ಮಹಡಿಯಲ್ಲಿರುವ ಕೊಠಡಿಗೆ ಶೌಚಾಲಯ (ಬಾತ್‌ರೂಂ) ನಿರ್ಮಿಸುವಿಕೆ.

4. ಮಿಮ್ಸ್ ಆವರಣದ ಪಶ್ಚಿಮ ದ್ವಾರದ ಗೇಟ್‌ನಿಂದ ಟಿ.ಬಿ. ಸೆಂಟರ್ ಕಟ್ಟಡದವರೆವಿಗೆ ಉದ್ಯಾನವನ ನಿರ್ಮಿಸುವಿಕೆ.
5. ಮಿಮ್ಸ್ ಆವರಣದಲ್ಲಿರುವ ಕ್ಷಯರೋಗ ಆಸ್ಪತ್ರೆಯ ಕಟ್ಟಡವನ್ನು ನವೀಕರಿಸುವ ಕಾಮಗಾರಿ.
6. ಮಿಮ್ಸ್ ಆವರಣದಲ್ಲಿರುವ ಆರ್ಯುವೇದ ಆಸ್ಪತ್ರೆಗೆ ಉಪಯೋಗಿಸಲಾಗುತ್ತಿದ್ದ ಕಟ್ಟಡದ ನವೀಕರಣ.
7. ಮಿಮ್ಸ್ ಆವರಣದಲ್ಲಿರುವ ಎಲ್ಲಾ ಕಟ್ಟಡಗಳನ್ನು ಪರೀಶಿಲಿಸಿ ವಾರ್ಷಿಕ ನಿರ್ವಹಣೆ ರಿಪೇರಿ ಕಾಮಗಾರಿ.
8. ಮಿಮ್ಸ್ ಆವರಣದಲ್ಲಿರುವ ಎಲ್ಲಾ ಕಟ್ಟಡಗಳನ್ನು ಪರಿಶೀಲಿಸಿ ವಿಶೇಷ ನಿರ್ವಹಣೆ ಕಾಮಗಾರಿ (ಬಾಗಿಲುಗಳು, ಕಿಟಕಿಗಾಜು, ಸ್ಯಾನಿಟರಿ ಇತ್ಯಾದಿ ಕಾಮಗಾರಿಗಳು).
9. ವೈದ್ಯರ ವಸತಿ ಗೃಹಗಳ ಹತ್ತಿರವಿರುವ ಖಾಲಿ ಜಾಗದಲ್ಲಿ ತಂತಿ ಬೇಲಿಯನ್ನು ನಿರ್ಮಿಸುವುದು.
10. ಮಿಮ್ಸ್ ಆವರಣದಲ್ಲಿ ಕಾರುಗಳನ್ನು ನಿಲ್ಲಿಸಲು 3 ಸ್ಥಳಗಳಲ್ಲಿ ಪಾರ್ಕಿಂಗ್‌ಗೆ ಸ್ಥಳಾವಕಾಶ ಮಾಡಿ ಶೆಲ್ಟರ್ ನಿರ್ಮಿಸುವುದು.
11. ಲೈಬ್ರರಿಕೊಠಡಿಯಲ್ಲಿ ಪಿ.ಜಿ. ವಿದ್ಯಾರ್ಥಿಗಳಿಗಾಗಿ. 18 ಅಡಿ X 14 ಅಡಿ ಅಳತೆಯ ಅಲ್ಯುಮಿನಿಯಂ ಪಾರ್ಟಿಷನ್‌ನಿಂದ ವಾಚನಾಲಯ ಕೊಠಡಿ ನಿರ್ಮಿಸುವಿಕೆ.
12. ಬಾಲಕರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಓದುವ (ಸ್ಟಡಿ ರೂಂ)ಕೊಠಡಿ ನಿರ್ಮಿಸುವುದು.
13. ಬಾಲಕರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಜಿಮ್ ಕೊಠಡಿ ನಿರ್ಮಿಸುವುದು.
14. ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಓದುವ (ಸ್ಟಡಿ ರೂಂ)ಕೊಠಡಿ ನಿರ್ಮಿಸುವುದು.
15. ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ವಿದ್ಯಾರ್ಥಿಗಳಿಗೆ ಜಿಮ್ ಕೊಠಡಿ ನಿರ್ಮಿಸುವುದು.
16. ಬಾಲಕರ ವಿದ್ಯಾರ್ಥಿನಿಲಯದ ಅಡಿಗೆ ಮನೆಯನ್ನು ಈಗಿನ ಗ್ಯಾಸ್ ಸಿಲಿಂಡ್‌ರ್ ಪದ್ಧತಿಯಿಂದ ಸ್ಟೀಂ ಕುಕ್ಕಿಂಗ್ ಪದ್ಧತಿಯಲ್ಲಿ ಉನ್ನತ ದರ್ಜೆಗೆ ಬದಲಿಸುವ ಕಾಮಗಾರಿ.
17. ಬಾಲಕಿಯರ ವಿದ್ಯಾರ್ಥಿನಿಲಯದ ಅಡಿಗೆ ಮನೆಯನ್ನು ಈಗಿನ ಗ್ಯಾಸ್ ಸಿಲಿಂಡ್‌ರ್ ಪದ್ಧತಿಯಿಂದ ಸ್ಟೀಂ ಕುಕ್ಕಿಂಗ್ ಪದ್ಧತಿಯಲ್ಲಿ ಉನ್ನತ ದರ್ಜೆಗೆ ಬದಲಿಸುವ ಕಾಮಗಾರಿ.
18. ಬಾಲಕಿಯರ ವಿದ್ಯಾರ್ಥಿನಿಲಯದ ಕೊಠಡಿಗಳಲ್ಲಿ ಫಂಗಸ್ ಬೆಳೆದಿದ್ದು ನೀರಿನ ಪೈಪ್ ಲೈನ್ ತುರ್ತು ರಿಪೇರಿ ಕಾಮಗಾರಿ.
19. ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯದ ಪ್ಯಾಸೇಜಗಳಲ್ಲಿ ಗೋಡೆ ನಿರ್ಮಿಸುವಿಕೆ.
20. ಮಿಮ್ಸ್ ಆವರಣದಲ್ಲಿ ಬೋಧಕ ಆಸ್ಪತ್ರೆಯ ಒಳರೋಗಿಗಳ ಸಹಾಯಕರುಗಳಿಗೆ ಮತ್ತು ಸಂಬಂಧಿಗಳಿಗೆ ಆಸ್ಪತ್ರೆಯ ಹೊರ ಆವರಣದಲ್ಲಿ ಶೆಲ್ಟರ್ ನಿರ್ಮಿಸುವುದು.

**ಕ್ರಮ:**– 1. ಮೇಲ್ಕಂಡ ಎಲ್ಲಾ ಕಾಮಗಾರಿಗಳಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸಲು ಲೋಕೋಪಯೋಗಿ ಇಲಾಖೆಯವರಿಗೆ ಸಭೆಯಲ್ಲಿ ತಿಳಿಸಲಾಯಿತು.

2. ಕ್ರಮ ಸಂಖ್ಯೆ 12 ಮತ್ತು 14 ಕ್ಕೆ ಸಂಬಂಧಿಸಿದಂತೆ ಸ್ಟಡಿ ರೂಂನಲ್ಲಿ ಯು.ಪಿ.ಎಸ್ ಅನ್ನು ಅಳವಡಿಸಲು ಕ್ರಮ ವಹಿಸಲು ಸಭೆಯಲ್ಲಿ ತಿಳಿಸಲಾಯಿತು.
3. ಕ್ರಮ ಸಂಖ್ಯೆ 20 ರ ಕಾಮಗಾರಿಯ ಬಗ್ಗೆ ಚರ್ಚಿಸಲಾಯಿತು ಶೆಲ್ಟರ್ ಬದಲಾಗಿ ಮೂರು ಅಂತಸ್ತಿನ ಕಟ್ಟಡವನ್ನು ನಿರ್ಮಿಸಲು ಸಭೆಯು ತೀರ್ಮಾನಿಸಿತು.
4. ಕ್ರಮ ಸಂಖ್ಯೆ 10 ಮತ್ತು 10 ರ ಕಾಮಗಾರಿಯನ್ನು ಹೆಚ್.ಆರ್.ಎ ನಿಧಿಯಿಂದ ಭರಿಸಲು ಒಪ್ಪಿಗೆ ನೀಡಲಾಯಿತು.
5. ಕ್ರಮ ಸಂಖ್ಯೆ 11 ರಿಂದ 19 ರ ಕಾಮಗಾಗಿಗಳನ್ನು ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅನುದಾನದಿಂದ ಭರಿಸಲು ಒಪ್ಪಿಗೆ ನೀಡಲಾಯಿತು.

6. ಮಾನ್ಯ ಜಿಲ್ಲಾಧಿಕಾರಿಗಳು ಎಲ್ಲಾ ಕಟ್ಟಡಗಳನ್ನು ವೀಕ್ಷಿಸಿ ಸಲಹೆ ನೀಡಿ ಆದಷ್ಟು ಶೀಘ್ರವಾಗಿ ನಿರ್ವಹಣಾ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳಲು ಸೂಚಿಸಿರುವ ಮೇರೆಗೆ, ಕ್ರಮ ಸಂಖ್ಯೆ 7 ಮತ್ತು 8 ರ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲು ಸಭೆಯ ಒಪ್ಪಿಗೆ ನೀಡಿತು.

## 4) ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.

1. ಮಿಮ್ಸ್ ಸಂಸ್ಥೆಯ ಹೆಸರಿನ ಬೋರ್ಡ್‌ಗಳನ್ನು ಕಟ್ಟಡದ ಮೇಲ್ಭಾಗದಲ್ಲಿ ಒಂದು ಮತ್ತು ಆವರಣಗೋಡೆ ಪಕ್ಕದಲ್ಲಿ ಒಂದು ಬೋರ್ಡ್‌ಗಳನ್ನು ಅಳವಡಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸದರಿ ಬೋರ್ಡ್‌ಗಳನ್ನು ಎ.ಸಿ.ಪಿ ಫೋಂ ಅಕ್ಷರಗಳಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ತಯಾರಿಸಿ ಅಳವಡಿಸಲು ನಿರ್ದೇಶಕರು ಕೋರಿದುದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.
2. ಮಿಮ್ಸ್ ಕಟ್ಟಡದ ಸುತ್ತ ಮಳೆಯನೀರು ಸರಾಗವಾಗಿ ಹರಿದು ಹೋಗುವಂತೆ ಚರಂಡಿಯನ್ನು ನಿರ್ಮಿಸಲು ಮತ್ತು ತಡೆಗೋಡೆ ನಿರ್ಮಿಸಲು ನಿರ್ದೇಶಕರು ಕೋರಿದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.
3. ಜಿಲ್ಲಾ ಕಾರಾಗೃಹದಿಂದ ಬರುವ ಖೈದಿ ರೋಗಿಗಳಿಗೆ ಒಂದು ಪ್ರತ್ಯೇಕ ವಾರ್ಡ್‌ನ್ನು ಮತ್ತು ಒಂದು ಔಟ್‌ಪೋಸ್ಟ್ ನಿರ್ಮಿಸುವ ಬಗ್ಗೆ ಚರ್ಚಿಸಲಾಗಿ ಸ್ಥಳಾವಕಾಶವಿದ್ದಲ್ಲಿ ಹೆಚ್ಚುವರಿ ಕೊಠಡಿಯನ್ನು ನಿರ್ಮಿಸಲು ಸಭೆಯು ಅನುಮೋದಿಸಿತು.
4. ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕಿದ್ದು ಅವುಗಳನ್ನು PWD, ಕರ್ನಾಟಕ ಭೂ ಸೇನಾ ನಿಗಮ (Land Army) ಮತ್ತು ನಿರ್ಮಿತಿ ಕೇಂದ್ರಗಳಿಗೆ ವಹಿಸಲು ಸಭೆಯಲ್ಲಿ ಅನುಮೋದಿಸಲಾಯಿತು.

ನಿರ್ದೇಶಕರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

ಜಿಲ್ಲಾಧಿಕಾರಿಗಳು ಹಾಗೂ ವರ್ಕ್ಸ್ ಕಮಿಟಿ ಅಧ್ಯಕ್ಷರು
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.

<u>ಪ್ರತಿಯನ್ನು:</u>

1. ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳ ಮಾಹಿತಿಗೆ ಕಳುಹಿಸಿದೆ.
2. ಕಛೇರಿ ಪ್ರತಿ.